doc 310
T.P-2

51 st Year of Publication ★ SATYAVADI Daily, MYSORE 4

Reg No B G 155

30 - 5 - 1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಆದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಸುವಾರ ಸಂಚಿಕೆ ವರ್ಷಕ್ಕೆ ರೂ 6



Space available

For Permanent Advertisement

ಸ್ಥಾಪಕರು : ತರುಣತೆ ಶಿರೋಮಣಿ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ರೈಲ್ವೇಯವರ ಮುಷ್ಕರದ ಯೋಚನೆಯೆ !

ಮೈಸೂರು ಅಸೋಸಿಯೇಷನ್ ಬಳಿ ಹಾಕಿರುವ ತಮ್ಮ ಸ್ವಂತ ಛತ್ರ
ಥಿಯೆಟರಿನಲ್ಲಿ ಪ್ರತಿ ದಿನ ಸಂಜೆ 6-30 ರಿಂದ 12-30 ರ ವರೆಗೆ

ವಿವಿಧ ವಿನೋದ Pastime & sports

ಸುಪ್ರಸಿದ್ಧ ನರ್ತಕಿಯರಿಂದ ವಿವಿಧ ತರದನೃತ್ಯಗಳು, ಹೈದರಾಬಾದಿನ ಸುಪ್ರಸಿದ್ಧ ಜಾದುಗಾರ ಶ್ರೀ ಎಲ್. ಎ. ಬಾಬು ಇವರಿಂದ ಅದ್ಭುತನುಯವಾದ ಇಂದ್ರಜಾಲಾಟ ನಡೆಯುವ ಮಾತನಾಡುವ ಬೊಂಬೆ, ಎಲೆಕ್ಟ್ರಿಕ್ ಕುರ್ಚಿ. ಪ್ರವೇಶದರ 25 ಪೈಸೆ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಕ್ಷಿಪ್ರದಲ್ಲೇ ನೆರವೇರಿಸಲಾಗುವುದು.

ಅಷ್ಟಾಧ್ಯಕ್ಷರು, ಪ್ರಧಾನಿಯವರು ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರಪೂರ್ವಕಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವಕವಂದಿಸುತ್ತೇನೆ.

ಸಂಪಾದಕ 'ಸತ್ಯವಾದಿ'
ಜಾಮರಾಜಸ್ಥಂ, ಮೈಸೂರು 4.

ಮೊರಾಟ ತೆರಿಗೆ

ಮೈಸೂರು— ಜನಸಂಘದ ಜಿಲ್ಲಾ ಸಭೆಯೊಂದರಲ್ಲಿ ಮೊರಾಟ ತೆರಿಗೆ ಕೂಡಲೇ ರದ್ದಾಗಬೇಕೆಂದು ನಿರ್ಧರಿಸಲಾಯಿತು — ಹಾನಿನಿರೋಧ ರದಿಯಾತಿಯಿಂದ ಸರಕಾರಕ್ಕೆ ಹೆಚ್ಚು ಉತ್ಪತ್ತಿ ದೊರೆತಿರುವದೆಂದು ಸೂಚಿಸಲಾಯಿತು.

★

ಜಗದ್ಗುರುಗಳ ನುಡಿ

ಹಾಸನ— ವೇದಕಾಲದಲ್ಲಿ ಗೋಮಾಂಸ ಭಕ್ಷಣೆ ಇರಲಿಲ್ಲವೆಂದು ದ್ವಾರಕಾ ಜಗದ್ಗುರುಗಳು ಹೇಳಿದರು — ಹಿಂದೂಮತದ ವಿರುದ್ಧ ಅನೇಕ ಕಾರ್ಯಗಳು ನಡೆಯುತ್ತಿವೆ ಎಂದರು — ಈಗಿನ ಕುಟುಂಬ ಯೋಜನಾ ಕಾರ್ಯವು ಹಿಂದೂಗಳಿಗೆ ಘಾತುಕವಾಗಿದೆಯೆಂದೂ, ಮುಸ್ಲಿಂ ಮತ್ತು ಕ್ರೈಸ್ತರು ಇನ್ನೂರಿಗೆ ಇದರಲ್ಲಿ ನಂಬಿಕೆಇಲ್ಲದೆ ಮುಂದಾಗಿ ಬರುತ್ತಿಲ್ಲವೆಂದೂ ಹೇಳಿದರು.

●

ಗೋಲಕದ ಹಣ ಕಳುವು

ನಂಜನಗೂಡು— ಶ್ರೀ ಶ್ರೀಕಂಠೇಶ್ವರ ದೇವಸ್ಥಾನದ ಗಣಪತಿ ಸನ್ನಿಧಿಯಲ್ಲಿ ಇಟ್ಟಿರು ಗೋಲಕದಲ್ಲಿನ ಹಣ ಕಳುವಾಗಿರುವದಾಗಿ ತಿಳಿಯಬಂದಿದೆ.

★

ಟಿಕೀಟಿಲ್ಲದ ಪ್ರಯಾಣ

ನವಲಿಹಟ್ಟಿ— ಟಿಕೀಟಿಲ್ಲದೆ ಪ್ರಯಾಣಗಳು ನಡೆಯುತ್ತಿರುವದರಿಂದ ರೈಲ್ವೆಗಳಿಗೆ ವರ್ಷಕ್ಕೆ ರೂ. 10 ಕೋಟಿ ನಷ್ಟವಾಗುತ್ತಿದೆ.

★

ಮೈಸೂರು— ಕೇಂದ್ರಕ್ಕೆ ಸರಿಸಮಾನವಾಗಿ ತನ್ನ ನೌಕರರಿಗೆ ಮಧ್ಯಂತರ ಭತ್ಯೆಯನ್ನು ರಾಜ್ಯ ಸರಕಾರ ಹೆಚ್ಚಿಸಿದೆ.

ಹೊಸ ಮಂತ್ರಿಮಂಡಲ

★

ಬೆಂಗಳೂರು— ಶ್ರೀ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿರುವ ಒಟ್ಟು 28 ಸದಸ್ಯರ ಮಂತ್ರಿಮಂಡಲವು ನಿನ್ನೆ ಬೆಳಿಗ್ಗೆ ರಾಜಭವನದ ಹುಲ್ಲುಗಾವಲಿನಲ್ಲಿ ನಿರ್ಮಿಸಿದ್ದ ಷಾಮಿಯಾನಾದಲ್ಲಿ ಗೌರ್ನರ್ ಪಕ್ಕರವರ ಸಮ್ಮುಖದಲ್ಲಿ ಪ್ರಮಾಣವಚನ ಸ್ವೀಕರಿಸಿತು.

ಮಂತ್ರಿ ಶ್ರೀ ದೊಡ್ಡಮೇಟಿಯವರು ಕನ್ನಡದಲ್ಲಿ ಪ್ರಮಾಣವಚನ ಸ್ವೀಕರಿಸಿದರು — ಇಬ್ಬರು ದೇವರ ಹೆಸರು ಬಿಟ್ಟು ಪ್ರಮಾಣವಚನ ಸ್ವೀಕರಿಸಿದರು—ಒಬ್ಬರು ದೇವರ ಬದಲು ಸತ್ಯ ಉಪಯೋಗಿಸಿದರು.

ಹೊಸ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಶ್ರೀ ನಿಜಲಿಂಗಪ್ಪನವರಿಗೆ ಭಾರಿ ದಂತದ ಕೊಂಬುಗಳಿದ್ದ ಒಂದು ಸುಂದರ ಗಂಧದಮರದ ಕರಂಡಿಗೆ ಬಹುಮಾನಿಸಿದರು ; ತಮ್ಮ ಚಿಕ್ಕ ಮನೆಗೆ ಇದು ದೊಡ್ಡದೆಂದೂ, ಸರಕಾರಿ ಮ್ಯೂಜಿಯಮ್ಮಿನಲ್ಲಿ ಇಡಬಹುದೆಂದೂ ಶ್ರೀ ನಿಜಲಿಂಗಪ್ಪನವರು ತಿಳಿಸಿದರು — ಶ್ರೀ ಪಾಟೀಲರಿಗೆ ಶ್ರೀ ನಿಜಲಿಂಗಪ್ಪನವರು ಒಂದು ಗಡಿಯಾರವನ್ನು ಬಹುಮಾನಿಸಿದರು — ಶ್ರೀ ನಿಜಲಿಂಗಪ್ಪನವರ ಪತ್ನಿಯವರಿಗೆ ಶ್ರೀ ಪಾಟೀಲರವರ ಪತ್ನಿ ಒಂದುಬೆಟ್ಟಿ ತಟ್ಟೆ ಬಹುಮಾನಿಸಿದರು.

ವಿಧಾನಸಭೆ ಬ್ಯಾಂಕ್ವೆಟ್ ಹಾಲ್‌ನಲ್ಲಿ ಶ್ರೀ ನಿಜಲಿಂಗಪ್ಪನವರನ್ನು ಬೀಳ್ಕೊಡುವಿಕೆಗಾಗಿ ಭೋಜನಕೂಟ ಏರ್ಪಡಿಸಲಾಗಿತ್ತು.

ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷರಾದ ಡಾ ಪಿ. ನಾಗಪ್ಪ ಆಳ್ವರು ಕಾಂಗ್ರೆಸ್ ಭವನದಲ್ಲಿ ಹೊಸ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರ ಗೌರವಾರ್ಥ ಸತ್ಕಾರಕೂಟ ಏರ್ಪಡಿಸಿದ್ದರು.

★

ರೈಲೀಯವರ ಮುಷ್ಕರವೇ

ನವದೆಹಲಿ— ತಮ್ಮ ಕುಂದುಕೊರತೆ ನೀಗಿಸದಿದ್ದರೆ ರೈಲ್ವೇಯ ನೌಕರರು ಸೆಪ್ಟಂಬರು 11 ಮತ್ತು 12 ರಂದು ಸಾಂಕೇತಿಕ ಮುಷ್ಕರವನ್ನೂ, ಅವಶ್ಯಬಿದ್ದರೆ ಅನಿರ್ದಿಷ್ಟ ಕಾಲದ ಮುಷ್ಕರವನ್ನೂ ನಡೆಸಲು ಸಂಘ ನಿರ್ಧರಿಸಿದೆ.

★

ಸತ್ಯಾಗ್ರಹಿಗಳ ಬಂಧನ

ಮೈಸೂರು— ಮಾಜಿ ಮಂತ್ರಿ ಶ್ರೀ ಎಂ. ರಾಚಯ್ಯನವರ ಮುಂದಾಳತ್ವದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಸತ್ಯಾಗ್ರಹ ನಡೆಸಲು ಪ್ರಯತ್ನಿಸಿದ 55 ಎಸ್ಸೆಸ್ಪಿ ಸತ್ಯಾಗ್ರಹಿಗಳು ಬಂಧಿಸಲ್ಪಟ್ಟರು.

★

ಪ್ರಧಾನಿ ಇಂದಿರಾರವರು

ಕೌಲಾಲಾಂಪುರ— ಮಲೇಷಿಯಾದಲ್ಲಿ 4 ದಿನಗಳ ಭೇಟಿಗಾಗಿ ಆಗಮಿಸಿದ ಪ್ರಧಾನಿ ಇಂದಿರಾರವರು ಇಲ್ಲಿಗೆ ನಿನ್ನೆ ಆಗಮಿಸಿದಾಗ 15000 ಮಂದಿ ಗುಂಪು ಜಯಕಾರದೊಡನೆ ವೈಭವ ಸ್ವಾಗತ ನೀಡಿದು.

●

ನೀರಿನ ತಾಪತ್ರಯ

ಬಿಜಾಪುರ— "ನಮಗೆ ನೀರು ಕೊಡಿ, ತುರ್ತು ನೀರು ಸರಬರಾಜು ಮಾಡಿ" ಎಂದು ಕೂಗುತ್ತಾ, ಜನರ ಭಾರಿ ಮೆರವಣಿಗೆಯು ನಿನ್ನೆ ಜಿಲ್ಲಾಧಿಕಾರಿಗಳ ಕಚೇರಿಗೆ ಹೋಯಿತು — ಖಾಲಿ ಕೊಡ ಹಿಡಿದಿದ್ದ ಅನೇಕ ಮಹಿಳೆಯರಿದ್ದರು.

★

ಚಿನ್ನದ ಸಾಗಾಣಿಕೆ

ಬ್ರಿಟನ್ನಿನಲ್ಲಿನ ನಿಷೇಧಿತದಾಸ್ತಾನುಗಾರರು ಕೊಳ್ಳುವಿಸಿಟ್ಟಿದ್ದ 223 ಮಿಲಿಯ ಪೌಂಡುಗಳಷ್ಟು ಚಿನ್ನವನ್ನು ಏಪ್ರಿಲ್‌ನಲ್ಲಿ ಪಡಗಿನಲ್ಲಿ ದೇಶದಾಚೆ ಸಾಗಿಸಿದರು.

ವಿವಿಧ ವಿಷಯಗಳು

★

ನವದೆಹಲಿ— ರಾಜಧನ ರದ್ದು ಮಾಡುವ ನಿರ್ಧಾರವನ್ನು ಪುನರ್ಪರಿಶೀಲಿಸಲು ಗೃಹಮಂತ್ರಿ ಶ್ರೀ ಚವನರು ತಿರಸ್ಕರಿಸಿರುವದಾಗಿ ವರದಿಯಾಗಿದೆ.

ಹೈದರಾಬಾದು— ಶ್ರೀ ವಿ. ಡಿ. ಸವಾರ್ಕರರ ದೊಡ್ಡ ಆಕಾರದ ಕಂಚಿನ ಪ್ರತಿಮೆ ಅನಾವರಣೆ ಮಾಡಲಾಯಿತು.

ಬೆಂಗಳೂರು— 1972 ರ ಚುನಾವಣಾ ನಂತರ ದೇಶದಲ್ಲಿ ರಾಜಕೀಯ ಭದ್ರತೆ ಬರುವದೆಂದು ಗ್ವಾಲಿಯರ್ ರಾಜಮಾತ ಶ್ರೀ ವಿಜಯರಾಜೆ ಸಿಂಧ್ಯರವರು ಹೇತಿದರು – ದೇಶದಲ್ಲಿನ ಅಸೌಖ್ಯ ಪರಿಸ್ಥಿತಿಗೆ ಕಾಂಗ್ರೆಸ್ಸಿನ ದುರಾಡಳಿತವೇ ಕಾರಣವೆಂದು ಹೇಳಿದರು.

ಬೆಂಗಳೂರು— ರೇಸ್ ಕೋರ್ಸನ್ನು ಊರಾಚೆ ಹಾಕುವ ವಿಷಯ ಸಧ್ಯದಲ್ಲಿಲ್ಲವೆಂದೂ, ಹೊಸ ರೇಸ್ ಕೋರ್ಸನ್ನು ನಿರ್ಮಿಸಲು ರೂ. 3–4 ಕೋಟಿ ಬೇಕಾಗಿದ್ದು ಈಗ ಅತಿ-ಮುಖ್ಯವಲ್ಲದ ಈ ಕಾರ್ಯಕ್ಕೆ ಉಪಯೋಗಿಸುವ ಇಚ್ಛೆ ಇಲ್ಲವೆಂದೂ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಹೇಳಿದರೇ.

ನ್ಯೂಯಾರ್ಕ್— ಅಧ್ಯಕ್ಷ ಕೆನೆಡಿಯವರ ಕೊಲೆಸಾತಕ ಹಾರ್ವೆ ಒಸ್ವಾಲ್ಡ್ ರಷ್ಯಾ ಖಾನಿಸ್ತಾನಿಂದ 1962 ನೇ ಫೆಬ್ರವರಿ 1 ರಂದು ಬರೆದಿದ್ದ ಕಾಗದಕ್ಕೆ ಹೆರಾಜಿನಲ್ಲಿ 10,00 ಡಾಲರು ದೊರೆಯಿತು – ಹಿಟ್ಲರ್ ನಾಯಿಯ ಮೂಸಿಚ್ಚಿನ ಲೈಸೆನ್ಸು 190 ಡಾಲರಿಗೆ ಕೊಳ್ಳಲಾಯಿತು.

ಆಶೋಕ ಎಜೆನ್ಸೀಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ

ಗೋವಧೆಕೂಡಲೆನಿಶೇಧವಾಗಲಿ

Cow Slaughter should be banned Immediately

SHAKTI SUDHA

A Superb Tonic

Protect the Cow

ಗೋರಕ್ಷಣೆ ಮಾಡಿ ಪ್ರಾಣಿಯುವ ಕಂಪನಿಗಳು ಹೆಚ್ಚಾಗಿ ನಡೆಯಲಿ

ಶ್ರೀಮದ್ವಾರಕಾ ಜಗದ್ಗುರು ಶಂಕರಾಶ್ರಮಸ್ವಾಮಿಗಳವರು ಶ್ರೀ ಶೃಂಗೇರಿ ಜಗದ್ಗುರು ಮಹಾಸನ್ನಿಧಿಗಳವರ ಆಶೀರ್ವಾದ ಅನುಗ್ರಹ ಪೂರ್ವಕವಾಗಿದೆ

ಸ್ವದೇಶದಲ್ಲಿ ಗೋರಕ್ಷಣೆ ಪ್ರಚಾರಕ್ಕೆ, ತಾಯಿಹಾಲಿಗೆ, ಪಶುವೈದ್ಯ ವಿಜ್ಞಾನಗಳ ವಿಶೇಷ ಪ್ರಚಾರ ಮಾಡುವುದಕ್ಕೆ ; ವಾರ್ಷಿಕ ಚಂದಾ 50 ಪೈಸೆ

ವುಡ್‌ಲಾಂಡ್ಸ್ ಜನವರಿಯು 4 ನೇ ವಾರ

.... ಸುಶೋಧ್ ಮುಖರ್ಜಿಯವರ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಷಾಗಿರ್ದ್ Shagird

ತಾರಾಗಣ— ಜಾಯ್ ಮುಖರ್ಜಿ, ಸೈರಾಬಾನು, ನಾಜಿರ್ ಹುಸೇನ್
ಅಚ್ಚಲ ಸಹದೇವ್, ಐ. ಎಸ್. ಜೋಹರ್ [ದಿನ 3 ಪ್ರದರ್ಶನ]

ಅಮೋಘ 3ನೇ ವಾರ

ಆಪೆರ—

.... ಅಮೋಘ ಕನ್ನಡ ಚಿತ್ರ ....

ಬೆಂಗಳೂರು ಮೇಲ್

ಪಾತ್ರ : ರಾಜಕುಮಾರ್ ನರಸಿಂಹರಾಜು ಕೊಟ ್ಟಾರಕರ್
ಅಶ್ವತ್ ಜಯಂತಿ ವಿಜಯಲಲಿತ

Help The Gorakshana

ಗೋರಕ್ಷಣಾಕ್ಕೆ ಹೆಂಜಲ ನೀಡಿ

— ಗೋರಕ್ಷಣೆ ವ್ಯವಸ್ಥಾಪಕರ ವಿನಂತಿ —

ಗೋರಕ್ಷಣಾಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ
ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಚಂದಾಪಾಯಿದೆ ಕಳೆದಿರುವವರು ಇವರಲ್ಲಿ ಚಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿಎಸ ವಿಶ್ವನಾಥ್ ಜಯನಗರ, ಬೆಂಗಳೂರು
ಶ್ರೀ ಬಿ ಜೆ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರ, ಮೈಸೂರು
ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಿಧರ್ಮಪ್ರಚಾರಸಭಾ, ಹೊಂಗನೂರು

ಗೋರಕ್ಷಣ ಆಫೀಸು ಸತ್ಯವಾದಿ ಪ್ರೆಸ್ ಚಾಮರಾಜಪುರಂ ಮೈಸೂರು 4

ವಿಳಾಸ— ಗೋರಕ್ಷಣ ಆಫೀಸು 1067 ಚಾಮರಾಜಪುರಂ, ಮೈಸೂರು

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4